ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 2, Sep-Oct 2019, 1-9**
**©*IIMRD*, Mysuru**

IIMRD JOURNALS

**www.iimrd.com**

# ಆದಿವಾಸಿ ಸಮುದಾಯಗಳ ಅಭಿವೃದ್ಧಿಯಲ್ಲಿ ಅರಣ್ಯದ ಪಾತ್ರ: ಒಂದು ವಿಶ್ಲೇಷಣೆ

**ಡಾ.ಎಲ್.ಶ್ರೀನಿವಾಸ[1] ಮತ್ತು ಶಿವರಾಜ ಎಸ್[2]**

**ಪೀಠಿಕೆ**

ಒಂದು ಸಮುದಾಯವನ್ನು ಆದಿವಾಸಿ ಎಂದು ಕರೆಯಬೇಕಾದರೆ ಆ ಸಮುದಾಯವು ತಮ್ಮದೇ ಆದ ಗುಣಲಕ್ಷಣಗಳನ್ನು ಒಳಗೊಂಡಿರುತ್ತದೆ. ಒಂದು ಚಿಕ್ಕ ಜನರ ಗುಂಪು ಅಥವಾ ಜನಸಮೂಹ ನಾಗರಿಕ ಸಮಾಜದ ನೆರಳಿನಿಂದ ದೂರವಿದ್ದುಕೊಂಡೆ, ಪ್ರಕೃತಿಯ ನಾನಾ ಬಗೆಯ ಪರಿಸರದ ಮಡಿಲಿನಲ್ಲಿ ವಿಶೇಷವಾದ ಜೀವನವನ್ನು ನಡೆಸುತ್ತ ಬಂದಿರುವ ಒಂದು ಜನಾಂಗವೇ ಬುಡಕಟ್ಟು ಅಥವಾ ಆದಿವಾಸಿ ಸಮುದಾಯ ಅಥವಾ ಅರಣ್ಯವಾಸಿಗಳು. ಇವರು ವ್ಯವಸ್ಥಿತವಾಗಿ ಒಂದೆಡೆ ನೆಲೆನಿಂತು ಜೀವನ ನಿರ್ವಹಿಸುವ ಪ್ರವೃತ್ತಿಯನ್ನು ಹೊಂದದೇ ಕಾಡುಮೇಡುಗಳಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ, ಅಲ್ಲಿ ದೊರೆಯುವ ಗೆಡ್ಡೆ–ಗೆಣಸು, ಹಣ್ಣು–ಹಂಪಲು, ಸೊಪ್ಪು–ಸೆದೆ ಮುಂತಾದ ಸಹಜೋತ್ಪನ್ನಗಳನ್ನು ಸೇವಿಸುತ್ತಾ, ಅಗತ್ಯಕ್ಕೆ ತಕ್ಕಂತೆ ಅರಣ್ಯ ಪ್ರಾಣಿಗಳನ್ನು ಬೇಟೆಯಾಡುತ್ತಾ ತಮ್ಮ ಬದುಕನ್ನು ಸಾಗಿಸುವವರು. ಬೇಸಾಯ ಮಾಡಿದರೂ ಬೇಸಾಯವನ್ನು ಸ್ಥಳದಿಂದ ಸ್ಥಳಕ್ಕೆ ಬದಲಿಸಿಕೊಂಡು, ತಮ್ಮ ಭವಿಷ್ಯದ ಕನಸನ್ನು ಕಾಣದೆ, ಅದಕ್ಕಾಗಿ ಸಂಪತ್ತನ್ನು ಕೂಡಿಡದೆ ವರ್ತಮಾನದ ಜೀವನಕ್ಕಾಗಿ ಹೆಚ್ಚು ಶ್ರಮವಹಿಸುವ ತೃಪ್ತಿಪಡುವ ಜನರೇ ಇವರು. ಧಾರ್ಮಿಕ ಭಾವನೆಗಳಲ್ಲಿ ತಮ್ಮದೇ ಆದ ದೈವಗಳನ್ನು ತಮ್ಮದೇ ಆದ ರೀತಿಯಲ್ಲಿ ಆರಾಧಿಸುತ್ತ, ಹಬ್ಬ ಹರಿದಿನಗಳನ್ನು ಆಚರಣೆ ಮಾಡುತ್ತ ಹಾಡಿ, ಕುಣಿದು, ಸಮುದಾಯದ ನಾಯಕನ ಆದೇಶವನ್ನು ಪ್ರಶ್ನಿಸದೇ ಚಾಚು ತಪ್ಪದೇ ಪಾಲಿಸುತ್ತ, ಅಗತ್ಯಕ್ಕೆ ತಕ್ಕಂತೆ ಉಡುಗೆ ತೊಡುಗೆಗಳ ಅಲಂಕಾರಗಳನ್ನು ಮಾಡಿಕೊಂಡು ಸಹಜ ಕುಟುಂಬ ಜೀವನವನ್ನು ಅನುಭವಿಸುತ್ತ, ತಮ್ಮದೇ ಆದ ಸಾಹಿತ್ಯ ಕಲೆಗಳನ್ನು ಸೃಷ್ಟಿಸುತ್ತ ತಮ್ಮ ಸಮುದಾಯದ ಕುಟುಂಬಗಳು ಬೇರೆ ಬೇರೆ ಕುಟುಂಬಗಳೊಂದಿಗೆ ಸೌಹಾರ್ದತೆಯಿಂದ ಅಥವಾ ಸಹಬಾಳ್ವೆ ಅನ್ಯೋನ್ಯವಾಗಿ ಬದುಕುತ್ತ, ತಮ್ಮದೇ ನ್ಯಾಯ ಪದ್ಧತಿಯನ್ನು ಹೊಂದಿ ನಿಸರ್ಗದ ಪ್ರಕೃತಿಯಲ್ಲಿ ಸಹಜವಾಗಿ ಬದುಕುವ ಅಮಾಯಕ ಮುಗ್ಧ ಅನಕ್ಷರಸ್ಥ ಜನ ಸಮುದಾಯವೇ ಆದಿವಾಸಿ ಸಮುದಾಯಗಳು ಎಂದು ಹೇಳಬಹುದಾಗಿದೆ.

ಮಾನವಶಾಸ್ತ್ರದಲ್ಲಿ ಬುಡಕಟ್ಟು ಎನ್ನುವ ಪದಕ್ಕೆ ಸಮನಾದ ಹಲವಾರು ಪರ್ಯಾಯ ಪದಗಳನ್ನು ಕಾಣುತ್ತೇವೆ. ಉದಾಹರಣೆಗೆ ಆದಿವಾಸಿಗಳು, ಗಿರಿಜನರು, ವನವಾಸಿಗಳು ಅನಾಗರಿಕರು, ಮೂಲನೆಲೆಯುಳ್ಳ, ಆದಿವಾಸಿ, ತುಳಿತಕ್ಕೊಳಗಾದ ವರ್ಗ, ಸರಳಸಮಾಜ, ಹಿಂದುಳಿದ ಹಿಂದೂಗಳು, ಅಲಕ್ಷಿತ ಜನಸಮುದಾಯ

---

[1] *ಸಹ ಪ್ರಾಧ್ಯಾಪಕರು, ಮಾನವಶಾಸ್ತ್ರ ವಿಭಾಗ., ಕನ್ನಡ ವಿಶ್ವವಿದ್ಯಾಲಯ, ಹಂಪಿ*

[2] *ಸಂಶೋಧನಾ ವಿದ್ಯಾರ್ಥಿ, ಮಾನವಶಾಸ್ತ್ರ ವಿಭಾಗ., ಕನ್ನಡ ವಿಶ್ವವಿದ್ಯಾಲಯ, ಹಂಪಿ*

ಮುಂತಾದವು. ಇಂಗ್ಲಿಷಿನ 'ಟ್ರೈಬ್' ಪದಕ್ಕೆ 'ಆದಿವಾಸಿ' 'ಬುಡಕಟ್ಟು' ಅಥವಾ 'ಗಿರಿಜನರು' ಎಂಬರ್ಥವಿದೆ. ಮೂದಲಿನಿಂದಲೂ ಬುಡಕಟ್ಟು ಎನ್ನುವ ಪದವನ್ನು ವ್ಯಾಖ್ಯಾನಿಸಲು ಹಲವಾರು ಪ್ರಯತ್ನಗಳನ್ನು ಮಾಡಲಾಗಿದೆ. ಆದರೆ ಒಮ್ಮತದ ಪದವನ್ನು ಇನ್ನೂ ಹೆಸರಿಸಲಾಗಿಲ್ಲ. ಹಲವಾರು ತಜ್ಞರು ತಮ್ಮದೇ ಆದ ನಿಟ್ಟಿನಲ್ಲಿ ಬುಡಕಟ್ಟು ಪದದ ಅರ್ಥವನ್ನು ತಿಳಿಸಿರುತ್ತಾರೆ. ಇವರು ನೀಡಿದ ವ್ಯಾಖ್ಯಾನಗಳು ಸಾಮಾನ್ಯವಾಗಿ ಇವರು ನೆಲೆಸಿರುವ ಭೌಗೋಳಿಕ ಪರಿಸರದ ನಿಟ್ಟಿನ ಮೇಲೆ ಅವಲಂಭಿತವಾಗಿರುತ್ತದೆ. ಆದಕಾರಣ ಅರಣ್ಯವಾಸಿಗಳು ಕಾಡುಗಳಲ್ಲಿ, ಗುಡ್ಡಬೆಟ್ಟಗಳಲ್ಲಿ, ದ್ವೀಪಗಳಲ್ಲಿ, ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿ ನೆಲೆಸಿರುವುದನ್ನು ಕಾಣಬಹುದಾಗಿದೆ.

**ಆದಿವಾಸಿ ಸಮುದಾಯಗಳು ಮತ್ತು ಅರಣ್ಯ**

ಅನಾದಿ ಕಾಲದಿಂದಲೂ ಆದಿವಾಸಿ ಸಮುದಾಯಗಳು ಮತ್ತು ಅರಣ್ಯದ ನಡುವೆ ಪಾರಂಪರಿಕ ನಿಕಟವಾದ ಸಂಬಂಧವಿದೆ. ಆದಿವಾಸಿ ಎನ್ನುವ ಶಬ್ದದ ಬಳಕೆ ನಮಗೆ ಅರಣ್ಯವಾಸಿಗಳ ಚಿತ್ರಣವನ್ನು ಮೂಡಿಸುತ್ತದೆ. ಹಲವಾರು ಶತಮಾನಗಳಿಂದಲೂ ಅರಣ್ಯವು ಆದಿವಾಸಿಗಳ ಅಸ್ತಿತ್ವಕ್ಕೆ ಕಾರಣವಾಗಿವೆ. ಮತ್ತೊಂದು ವಿಧವಾಗಿ ಹೇಳುವುದಾದರೆ, ಅನಾದಿ ಕಾಲದಿಂದಲೂ ಆದಿವಾಸಿ ಸಮುದಾಯಗಳು ಅರಣ್ಯಗಳನ್ನು ಸಂರಕ್ಷಿಸುತ್ತಿದ್ದರು. ಆ ಕಾರಣದಿಂದಾಗಿ ಅರಣ್ಯ ಹಾಗೂ ಆದಿವಾಸಿ ಸಮುದಾಯಗಳ ನಡುವೆ ಸಾಮಾಜಿಕ ಸಂಬಂಧ ಅವಿಚ್ಛಿನ್ನವಾಗಿದೆ. ಇಂದಿಗೂ ಆದಿವಾಸಿಗಳು ಅರಣ್ಯಗಳಲ್ಲಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೇ ನೆಲೆಸಿರುವುದು ಕಂಡುಬರುತ್ತದೆ. ಹಾಗೆಯೆ ಇವರುಗಳು ತಮ್ಮ ಹಲವಾರು ಬಗೆಯ ಅವಶ್ಯಕತೆಗಳಿಗಾಗಿ ಅರಣ್ಯವನ್ನು ಉಪಯೋಗಿಸಿಕೊಳ್ಳುತ್ತ ಬಂದಿರುವುದನ್ನ ನಾವು ಕಾಣಬಹುದಾಗಿದೆ. ಎಲ್ಲಿಯವರೆಗೂ ಅರಣ್ಯವು ಆದಿವಾಸಿ ಸಮುದಾಯಗಳ ಅಧೀನದಲ್ಲಿತ್ತೋ ಅಲ್ಲಿಯವರೆಗೂ ಅರಣ್ಯ ಪ್ರದೇಶದ ಜಾಗವು ಅಥವಾ ವಿಸ್ತೀರ್ಣವು ಕಡಿಮೆಯಾಗಿರಲಿಲ್ಲ ಹಾಗೂ ಅರಣ್ಯವು ನಾಶವಾಗಿರಲಿಲ್ಲ ಆದರೆ ಆದಿವಾಸಿಗಳನ್ನು ಅರಣ್ಯದ ಕಾರ್ಮಿಕರನ್ನಾಗಿಸಿ ಅರಣ್ಯದಿಂದ ಅನ್ಯಗೊಳಿಸಿದ ಮೇಲೆ ಆದಿವಾಸಿ ಸಮುದಾಯಗಳ ಅಳಿವು ಉಳಿವಿನ ಪ್ರಶ್ನೆಯಾಗುತ್ತಾ ಹೋಯಿತು. ಕಾರಣ ಇವರ ಪ್ರಾಥಮಿಕ ನೆಲೆಗೆ ಮೂಲ ಕಾರಣವಾದ ಸಣ್ಣ ಅರಣ್ಯ ಉತ್ಪಾದನೆಗಳ ಅನುಕೂಲತೆಗಳಿಂದ ಜೀವನವನ್ನು ನಡೆಸುತ್ತಿದ್ದರು. ಆದಿವಾಸಿ ಸಮುದಾಯಗಳ ಸಂಸ್ಕೃತಿ ಮತ್ತು ಅರಣ್ಯ ಎರಡೂ ಬೇರ್ಪಡಿಸಲಾಗದ ಘಟಕಗಳು, ಇವೆರಡೂ ಒಂದಕ್ಕೊಂದು ಅವಲಂಬನೆ ಹಾಗೂ ಪರಸ್ಪರ ಸಂಬಂಧ ಹೊಂದಿವೆ. ಆದಿವಾಸಿ ಸಮುದಾಯಗಳಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪದ್ಧತಿಗಳನ್ನು ರಚಿಸುವಲ್ಲಿ ಅರಣ್ಯವು ಮಹತ್ತರ ಪಾತ್ರವನ್ನು ನಿಭಾಯಿಸುತ್ತಿದೆ. ಅವರ ಸಮುದಾಯಗಳಲ್ಲಿ ಕುಲದ ಹೆಸರುಗಳು ಮರಗಿಡಗಳ, ಪಕ್ಷಿ, ಪ್ರಾಣಿ, ಮುಂತಾದವುಗಳಾಗಿರುತ್ತದೆ. ಇವೆಲ್ಲವೂ ಅರಣ್ಯ ಜೀವಿಗಳಾಗಿದ್ದು ಇವುಗಳೊಂದಿಗೆ ಸಾವಯವ ಸಂಬಂಧವನ್ನು ಹೊಂದಿರುತ್ತಾರೆ. ಹಾಗೂ ಇವುಗಳನ್ನು ಲಾಂಛನವನ್ನಾಗಿ ಬಳಸಿಕೊಂಡಿರುತ್ತಾರೆ. ಕುಲದ ಸಂಘಟನೆಯು ಈ ಲಾಂಛನದ ಸಂಬಂಧ ಆಧಾರವನ್ನು ಒಳಗೊಂಡಿರುತ್ತದೆ. ಆದಿವಾಸಿ ಸಮುದಾಯಗಳಿಗೆ ಅರಣ್ಯವು ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಿದೆ. ಒಂದೇ ಹಾಡಿಗೆ ಸೇರಿದ ಆದಿವಾಸಿ ಇಲ್ಲವೇ ಇತರೇ ಹಾಡಿಗಳ ಆದಿವಾಸಿಗಳು ಸಣ್ಣ ಅರಣ್ಯ ಉತ್ಪಾದನೆಗಳ ಸಂಗ್ರಹಕ್ಕೆ ಅರಣ್ಯದಲ್ಲಿ ಒಗ್ಗೂಡುತ್ತಾರೆ. ಇಲ್ಲಿ ಇವರು ಹಲವು ವಿಷಯಗಳ ಕುರಿತು ಚರ್ಚಿಸುತ್ತಾರೆ. ಈ ಸಮಯದಲ್ಲಿ ಹಲವು ವಿವಾಹ ಸಂಬಂಧಗಳೂ

ಹೊಂದಾಣಿಕೆಯಾಗುವುದುಂಟು. ಆ ಪ್ರಕಾರವಾಗಿ ಆದಿವಾಸಿ ಸಮುದಾಯಗಳ ಸಾಮಾಜಿಕ ಪದ್ಧತಿಗಳ ರಚನೆಯಲ್ಲಿ ಅರಣ್ಯವು ಮಹತ್ತರ ಪಾತ್ರವನ್ನು ನಿಭಾಯಿಸುತ್ತದೆ.

ಆದಿವಾಸಿ ಸಮುದಾಯಗಳ ಆರ್ಥಿಕತೆಯು ಇಂದಿಗೂ ಅರಣ್ಯವನ್ನು ಅವಲಂಭಿಸಿರುತ್ತದೆ. ಇವರು ತಮ್ಮ ಮನೆಗಳನ್ನು ಬಿದಿರು, ಹುಲ್ಲುಗಳು, ಕಟ್ಟಿಗೆಗಳು, ಎಲೆಗಳು ಮುಂತಾದವುಗಳಿಂದ ಕಟ್ಟಿಕೊಳ್ಳುತ್ತಾರೆ. ಇವರು ತಮ್ಮ ಜೋಪಡಿಗಳನ್ನು ಕಟ್ಟಿಗೆ ಹಾಗೂ ಹುಲ್ಲಿನಿಂದ ಕಟ್ಟಿಕೊಳ್ಳುತ್ತಾರೆ. ಅರಣ್ಯದಲ್ಲಿ ದೊರಕುವ ಸಾಮಾಗ್ರಿಗಳಿಂದ ತಮ್ಮ ಮನೆಯ ರಿಪೇರಿಯನ್ನು ಮಾಡಿಕೊಳ್ಳುತ್ತಾರೆ. ಅರಣ್ಯದಲ್ಲಿ ದೊರಕುವ ವಸ್ತುಗಳಿಂದ ಪರಕೆ, ಬುಟ್ಟಿ ಹಾಗೂ ತಟ್ಟೆಗಳನ್ನು ಹಾಗೂ ಕೃಷಿ ಸಲಕರಣೆ, ಮನೆಬಳಕೆ ವಸ್ತುಗಳು ಹಾಗೂ ಯುದ್ಧ ಸಾಮಾಗ್ರಿಗಳು ಮುಂತಾದವುಗಳನ್ನು ತಯಾರಿಸುತ್ತಾರೆ. ಹೀಗಾಗಿ ಆದಿವಾಸಿ ಸಮುದಾಯಗಳು ಭೌತಿಕ ಸಂಸ್ಕೃತಿಯು ಸಂಪೂರ್ಣವಾಗಿ ಅರಣ್ಯವನ್ನು ಅವಲಂಬಿಸಿದೆ.

ಕಿರು ಅರಣ್ಯ ಉತ್ಪಾದನೆಗಳ ಸಂಗ್ರಹವೇ ಬಹು ಆದಿವಾಸಿ ಸಮುದಾಯಗಳ ಪ್ರಮುಖ ಆದಾಯದ ಮೂಲ. ಆರ್ಥಿಕ ಚಟುವಟಿಕೆಯಿಂದ ಇವರು ಅರಣ್ಯ ಹಾಗೂ ಅದರ ಸುತ್ತಮುತ್ತ ನೆಲೆಸಿರುವುದರಿಂದ ಇವರು ಅರಣ್ಯದಲ್ಲಿ ಕಿರು ಉತ್ಪಾದನೆಗಳ ಸಂಗ್ರಹದಲ್ಲಿ ತೊಡಗುತ್ತಾರೆ. ಒಂದು ವರ್ಷದ ಅವಧಿಯು ಮೂರು ಋತುಗಳನ್ನು ಒಳಗೊಂಡಿರುತ್ತದೆ. ಅವು ಚಳಿಗಾಲ, ಮಳೆಗಾಲ ಹಾಗೂ ಬೇಸಿಗೆಕಾಲ. ಪ್ರತಿ ಋತುವೂ ಆದಿವಾಸಿ ಸಮುದಾಯಗಳಿಗೆ ತನ್ನ ಉತ್ಪಾದನೆಗಳನ್ನು ನೀಡುತ್ತದೆ. ಹೀಗಾಗಿ ಅರಣ್ಯವು ವರ್ಷವಿಡಿ ತನ್ನ ವಿವಿಧ ಉತ್ಪಾದನೆಗಳಿಂದ ಆದಿವಾಸಿ ಸಮುದಾಯಗಳಿಗೆ ಸಹಕಾರಿಯಾಗಿದೆ. ವಿವಿಧ ಋತುಗಳಲ್ಲಿ ಆದಿವಾಸಿಗಳು ಅರಣ್ಯದಿಂದ ಹಣ್ಣು, ಗಡ್ಡೆ, ಗೆಣಸು, ಹೂ, ಎಲೆ, ತರಕಾರಿ ಹಾಗೂ ಬೀಜಗಳನ್ನು ಸಂಗ್ರಹಿಸಿಕೊಳ್ಳುತ್ತಿರುತ್ತಾರೆ. ಇದನ್ನು ಇವರು ಹಸಿಯಾಗಿಯೇ ಇಲ್ಲವೆ ಬೇಯಿಸಿಯು ಬಳಸುತ್ತಾರೆ ಅಥವಾ ಸೇವಿಸುತ್ತಾರೆ. ಇವರು ಹುಲ್ಲು ಮತ್ತು ತೊಗಟೆಗಳಿಂದ ಹಗ್ಗವನ್ನು ತಯಾರಿಸುತ್ತಾರೆ. ಎಲೆಗಳು ಹಾಗೂ ಹುಲ್ಲನ್ನು ದನಕರುಗಳಿಗೆ ಮೇವಾಗಿ ಮತ್ತು ಕಟ್ಟಿಗೆಯನ್ನು ಹಾಗೂ ಒಣಎಲೆಗಳನ್ನು ಉರುವಲಾಗಿ ಬಳಸುವುದುಂಟು. ಇವರು ಅಂಟು, ಜೇನುತುಪ್ಪ, ಅರಗು ಮುಂತಾದವುಗಳನ್ನು ಹಣವನ್ನು ಗಳಿಸಲು ಸಂಗ್ರಹಿಸುತ್ತಾರೆ. ಇದಲ್ಲದೇ ಸ್ಥಳೀಯ ಪ್ರದೇಶಗಳಿಗೆ ತೆರಳಿ ಅರಣ್ಯದಿಂದ ಸಂಗ್ರಹಿಸಿದ ಉತ್ಪಾದನೆಗಳನ್ನು ಮಾರಿ ಹಣ ಗಳಿಸುತ್ತಾರೆ. ಇವರು ಅರಣ್ಯದಲ್ಲಿ ಬದಲಾಯಿಸುವ ಕೃಷಿಯನ್ನು ಅನುಸರಿಸುತ್ತಾರೆ. ಇವರು ಅರಣ್ಯದಲ್ಲಿ ಕಾರ್ಮಿಕರಾಗಿ ಶ್ರಮಿಸುವುದನ್ನು ಕಾಣಬಹುದು. ಇದಲ್ಲದೆ ಕಟ್ಟಿಗೆಯನ್ನು ಕಡಿದು ಅದನ್ನು ಹೊರೆಯಾಗಿ ಕಟ್ಟಿಕೊಂಡೊಯ್ದು ಮಾರುತ್ತಾರೆ. ಆದಕಾರಣ ಅರಣ್ಯವು ಆದಿವಾಸಿ ಸಮುದಾಯಗಳ ಜೀವನಾಧಾರ ಹಾಗೂ ಆರ್ಥಿಕ ಚಟುವಟಿಕೆಯ ಮೂಲವಾಗಿದೆ ಎಂದು ಹೇಳುವುದರಲ್ಲಿ ಯಾವ ಸಂದೇಹವು ಇಲ್ಲ.

ಆದಿವಾಸಿ ಸಮುದಾಯಗಳಲ್ಲಿ ತಮ್ಮ ಪೂರ್ವಜರು, ದೇವಾಧಿ ದೇವತೆಗಳು ಅರಣ್ಯಗಳಲ್ಲಿ ನೆಲೆಸಿರುತ್ತಾರೆಂದು ನಂಬಿರುತ್ತಾರೆ. ಅರಣ್ಯದ ವಿವಿಧ ಸ್ಥರಗಳಾದ ಮರ, ಪೊದೆ, ಗಿಡದ ಬೇರುಗಳು, ಗುಡ್ಡದ ಮಣ್ಣು, ಬಿದಿರು, ಆಲದ ಅಥವಾ ಹುಣಸೆ ಮರಗಳಲ್ಲಿ ಆತ್ಮಗಳು ನೆಲೆಸಿರುತ್ತವೆಂದು ಗಾಢವಾಗಿ ಇವರು ನಂಬಿರುತ್ತಾರೆ. ಅರಣ್ಯಗಳ ಸಮೀಪ ಸಣ್ಣ ಸಣ್ಣ ತೋಪುಗಳಿರುವುದು ಕಂಡುಬರುತ್ತದೆ. ಈ ಪ್ರದೇಶಗಳಲ್ಲಿ

ಪ್ರತಿಬಿಂಬ
IIMRD JOURNALS
PRATIBIMBA – Multidisciplinary Kannada Research Journal of IIMRD

ತಮ್ಮ ಪೂರ್ವಜರ ಆತ್ಮಗಳು ಹಾಗೂ ದೇವಾನುದೇವತೆಗಳು ನೆಲೆಸಿರುವ ಪವಿತ್ರ ಸ್ಥಳಗಳಾಗಿ ಸ್ಥಾಪನೆ ಮಾಡಿರುತ್ತಾರೆ. ಹಲವಾರು ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಆದಿವಾಸಿಗಳು ಗಿಡಗಳಿಗೆ, ಪೊದೆಗಳಿಗೆ, ಪ್ರಾಣಿ, ಪಕ್ಷಿಗಳು ನೆಲೆಸಿರುವ ಮರದ ತೋಪುಗಳನ್ನು ಗೌರವಿಸುವುದು ಕಂಡುಬರುತ್ತದೆ. ಹಾಗೆಯೆ ಅರಣ್ಯಗಳಲ್ಲಿರುವ ಗಿಡಮರಗಳನ್ನು, ಪ್ರಾಣಿಗಳನ್ನು ಪೂಜಿಸುವುದು ಕೂಡ ಕಂಡುಬರುತ್ತದೆ. ಆದಿವಾಸಿ ಸಮುದಾಯಗಳು  ದೇವತೆಗಳನ್ನು ಅರಣ್ಯದಲ್ಲಿ ದೊರಕುವ ಎಲೆ ಹೂಗಳಿಂದ ಪೂಜಿಸುತ್ತಾರೆ.

ಆದಿವಾಸಿ ಸಮುದಾಯಗಳ ಜನರು ವಿವಿಧ ಕಾಯಿಲೆಗಳಿಂದ ಗುಣಮುಖರಾಗಲು ಅರಣ್ಯದಲ್ಲಿ ದೊರಕುವ ದೇಸಿ ಔಷಧಿಗಳನ್ನು ಬಳಸುತ್ತಾರೆ. ಇವರು ಅರಣ್ಯದಿಂದ ಔಷಧಿ ಗುಣವುಳ್ಳ ಗಿಡಮೂಲಿಕೆಗಳನ್ನು ಸಂಗ್ರಹಿಸಿರುತ್ತಾರೆ. ತೊಗಟೆ, ನಾರು, ಬೇರು, ಎಲೆ, ಕಾಂಡಗಳಿಂದ ಮುಲಾಮುಗಳನ್ನು ತಯಾರಿಸುತ್ತಾರೆ. ಇವರು ಹುಲಿ ಅಥವಾ ಸಿಂಹಗಳ ಉಗುರು ಅಥವಾ ಆನೆಗಳ ದಂತಗಳಿಂದ ಮಂಗಗಳ ಎಲುಬುಗಳಿಂದ ಜಾದು ಮಾಡುತ್ತಾ ಕಾಯಿಲೆಗಳನ್ನು ನಿವಾರಿಸುತ್ತಾರೆ. ಇವುಗಳನ್ನೆಲ್ಲಾ ಅರಣ್ಯದಿಂದ ಸಂಗ್ರಹಿಸಿರುತ್ತಾರೆ.

ಆದಿವಾಸಿ ಸಮುದಾಯಗಳ ರಾಜಕೀಯ ಪದ್ಧತಿಯಲ್ಲಿ ಅರಣ್ಯವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಪರಾಧಗಳಿಗೆ ಹಾಗೂ ಶಿಕ್ಷೆಗಳ ನಿರ್ಧಾರಕ್ಕೆ ಎಲ್ಲಾ ಆದಿವಾಸಿ ಸಮುದಾಯಗಳು ನ್ಯಾಯ ಪಂಚಾಯಿತಿಗೆ ಸಣ್ಣ ಸಣ್ಣ ತೋಪಿನಲ್ಲಿ ಸೇರುತ್ತಾರೆ. ಈ ಸಣ್ಣ ಸಣ್ಣ ತೋಪುಗಳು ದೇವಾನುದೇವತೆಗಳ ಹಾಗೂ ಪೂರ್ವಜರ ನೆಲೆಯಾಗಿರುತ್ತವೆ ಎಂಬ ನಂಬಿಕೆ ಇವರದು. ಆದ್ದರಿಂದ ಇವರೆಲ್ಲರ ಸನ್ನಿದಾನದಲ್ಲಿ ಸುಳ್ಳು ಹೇಳಲು ಅಸಾಧ್ಯವೆಂದು ಭಾವಿಸಿರುತ್ತಾರೆ. ಪಂಚಾಯಿತಿ ನಡೆಯುವ ಸಂದರ್ಭದಲ್ಲಿ, ಗ್ರಾಮದ ಮುಖ್ಯಸ್ಥ, ಪಂಚಾಯಿತಿಯ ಮುಖ್ಯಸ್ಥ ಮತ್ತು ಕುಟುಂಬದ ಮುಖ್ಯಸ್ಥರು ತಪ್ಪಿತಸ್ಥ ಹಾಗೂ ಸಾಕ್ಷಿದಾರರು ಸಾಲ್ ವೃಕ್ಷದ ಎಲೆಗಳನ್ನು ಕೈಯಲ್ಲಿ ಹಿಡಿದು ಕಂಡ ಸತ್ಯವನ್ನು ನುಡಿಯುತ್ತೇವೆಂದು ಪ್ರಮಾಣ ಮಾಡುತ್ತಾರೆ. ಆದಕಾರಣ ಅರಣ್ಯವಲಯ ಆದಿವಾಸಿ ಸಮುದಾಯಗಳಲ್ಲಿ  ರಾಜಕೀಯ ಸಹಪದ್ಧತಿಯಲ್ಲಿ ಮಹತ್ತರ ಪಾತ್ರವನ್ನು ನಿಭಾಯಿಸುತ್ತದೆ.

ಈ ಮೇಲಿನ ವಿಷಯಗಳಿಂದ ತಿಳಿಯುವುದೇನೆಂದರೆ ಅರಣ್ಯ ಹಾಗೂ ಆದಿವಾಸಿಗಳ ನಡುವೆ ಪರಸ್ಪರ ಅವಲಂಬನೆ ಇರುತ್ತದೆ. ಹಾಗೂ ಬೇರ್ಪಡಿಸಲಾಗದ  ಸಾಮಾಜಿಕ ಸಂಬಂಧವಿರುತ್ತದೆ. ಆದಿವಾಸಿ ಸಮುದಾಯಗಳು ಅರಣ್ಯದೊಂದಿಗೆ ಒಂಟಿಯಾಗಿ ಅಸ್ತಿತ್ವದಲ್ಲಿ ಇರುವುದಿಲ್ಲ. ಸಹಜೀವನವನ್ನು ಹೊಂದಿರುತ್ತಾರೆ ಎಂಬುದು ಕಂಡುಬರುತ್ತದೆ.

**ಆದಿವಾಸಿಗಳ ಆರ್ಥಿಕತೆ**

ಆದಿವಾಸಿ ಸಮುದಾಯಗಳ ಆರ್ಥಿಕತೆಯು ಅರಣ್ಯದ ಉತ್ಪನ್ನಗಳ ಮೇಲೆ ಅವಲಂಬನೆಯನ್ನು ಹೊಂದಿರುತ್ತಾರೆ. ಮಾನವಸಂಪನ್ಮೂಲ ಹಾಗೂ ನೈಸರ್ಗಿಕ ಸಂಪನ್ಮೂಲಗಳೆರಡರ ನಡುವೆ ಹೊಂದಾಣಿಕೆಯೊಂದಿಗೆ ಲಾಭವನ್ನು ಗಳಿಸುವ ಅಂಶವೇ ಆರ್ಥಿಕ ಆದಾಯ. ಆದಿವಾಸಿ ಸಮುದಾಯಗಳ ಆರ್ಥಿಕತೆಯು ಅರಣ್ಯವನ್ನು ಅವಲಂಬಿಸಿರುವುದಕ್ಕೆ ಪ್ರಮುಖ ಕಾರಣ ಉತ್ಪಾದನೆ, ಬಳಕೆ, ವಿತರಣೆ, ಮಾರುಕಟ್ಟೆ, ವ್ಯಾಪಾರ, ಮುಂತಾದವು ಅರಣ್ಯಕ್ಕೆ ಸಂಬಂಧಪಟ್ಟಿದ್ದಾಗಿವೆ.

**ಬೇಟೆಯಾಡುವುದು**

ಅನಾದಿ ಕಾಲದಿಂದಲೂ ಬೇಟೆಯು ಆದಿವಾಸಿ ಸಮುದಾಯಗಳ ಒಂದು ರೀತಿಯ ಆರ್ಥಿಕ ಚಟುವಟಿಕೆಯಾಗಿದೆ. ಪಕ್ಷಿಗಳನ್ನು, ಜಿಂಕೆ, ಸಾರಂಗ, ಮೊಲ, ಪಾರಿವಾಳ, ಗುಬ್ಬಿ, ನವಿಲು ಮುಂತಾದವುಗಳನ್ನು ಬೇಟೆಯಾಡುತ್ತಿದ್ದರು. ಪಕ್ಷಿ ಹಾಗೂ ಪ್ರಾಣಿಗಳ ಮಾಂಸವನ್ನು ಬೇಯಿಸಿ ಭೋಜನ ತಯಾರಿಸಿ ಸಮುದಾಯದ ಸದಸ್ಯರುಗಳಿಗೆ ಹಂಚುತ್ತಿದ್ದರು. ಹಲವು ಹಬ್ಬಗಳ ಸಂದರ್ಭಗಳಲ್ಲಿ, ಉದಾಹರಣೆಗೆ ಜನನ ಸಂದರ್ಭದಲ್ಲಿ ಧಾರ್ಮಿಕ ಆಚರಣೆಗಾಗಿ ಉಪಯೋಗಿಸುವ ಬೇಟೆಯನ್ನೇ ಬೇಟೆಯಾಡುತ್ತಿದ್ದರು. ಪ್ರಾಣಿಗಳ ಚರ್ಮಗಳನ್ನೇ ದೇಹವನ್ನು ಮುಚ್ಚಲು ಬಳಸುತ್ತಿದ್ದರು. ಚರ್ಮದ ಚೀಲಗಳಲ್ಲಿ ಹಾಲು, ನೀರನ್ನು ಸಂಗ್ರಹಿಸಿ ತಮ್ಮೊಡನೆ ತೆಗೆದುಕೊಂಡು ಹೊರಡುತ್ತಿದ್ದರು. ಪ್ರಾಣಿಗಳ ಉಗುರು, ದಂತ, ಕೂದಲು, ಎಲುಬುಗಳಿಂದ ಪವಾಡಗಳನ್ನು ಮಾಡುತ್ತಾರೆ. ಬೇಟೆಯು ಆದಿವಾಸಿಗಳ ಮಹತ್ತರ ಸಾಂಸ್ಕೃತಿಕ ಲಕ್ಷಣವಾಗಿದೆ. ಇಂದಿಗೂ ಇವರ ಮನೆಗಳಲ್ಲಿ ಬೇಟೆಯ ಪರಿಕರಗಳನ್ನು ಕಾಣಬಹುದು. ಇವರಲ್ಲಿರುವ ಕೃಷಿ ಸಲಕರಣೆಗಳೆಂದರೆ ಬಲೆ, ಭರ್ಚಿ, ಬಿಲ್ಲು, ಬಾಣ ಮುಂತಾದವುಗಳು. ಇತ್ತೀಚೆಗೆ ಸರಕಾರವು ಕ್ರೂರ ಪ್ರಾಣಿ ಮತ್ತು ಪಕ್ಷಿಗಳ ಬೇಟೆಯನ್ನು ನಿಷೇಧಿಸಿದೆ.

**ಆಹಾರ ಸಂಗ್ರಹಣೆ**

ಇತಿಹಾಸ ಪೂರ್ವ ಕಾಲದಿಂದಲೂ ಆಹಾರ ಸಂಗ್ರಹಣೆಯು ಆದಿವಾಸಿಗಳ ಪ್ರಮುಖ ಆರ್ಥಿಕ ಚಟುವಟಿಕೆಯಾಗಿತ್ತು. ಆಹಾರ ಸಂಗ್ರಹಣೆಯು ಮಾನವನ ಆರ್ಥಿಕತೆಯ ಮೊದಲ ಹೆಜ್ಜೆಯಾಗಿತ್ತು. ಕಾರಣ ಮಾನವನಿಗೆ ಉತ್ಪಾದನೆಯ ಯಾವ ಜ್ಞಾನವು ಇರಲಿಲ್ಲ. ಮಾನವನು ತನ್ನ ಜೀವನಾಧಾರ ಹಾಗೂ ಅಸ್ತಿತ್ವಕ್ಕಾಗಿ ಸಂಪೂರ್ಣವಾಗಿ ಅರಣ್ಯವನ್ನು ಅವಲಂಬಿಸಿದ್ದನು. ದೇಶದ ಎಲ್ಲಾ ಭಾಗಗಳಲ್ಲೂ ಆದಿವಾಸಿಗಳು ಆಹಾರ ಸಂಗ್ರಹಿಸುವುದನ್ನು ಕಾಣಬಹುದು. ಆದಿವಾಸಿಗಳು ಆರ್ಥಿಕ ಚಟುವಟಿಕೆಗಳಾದ ಕುರಿ ಸಾಕಾಣಿಕೆ, ಕೃಷಿ, ಅರಣ್ಯ ಹಾಗೂ ಅದರ ಸುತ್ತಮುತ್ತಲೂ ಆಹಾರ ಪದರ್ಥಗಳನ್ನು ಸಂಗ್ರಹಿಸುವುದು ಮಾಡುತ್ತಿರುತ್ತಾರೆ.

**ಖಾದ್ಯ ಬೇರುಗಳ ಸಂಗ್ರಹಣೆ**

ಅರಣ್ಯ ಹಾಗೂ ಸುತ್ತಮುತ್ತಲು ವಾಸಿಸುವ ಆದಿವಾಸಿಗಳಿಗೆ ಭೂಮಿಯಲ್ಲಿ ದೊರಕುವ ಗಡ್ಡೆ ಗೆಣಸುಗಳ ಜ್ಞಾನವಿರುತ್ತದೆ. ಸ್ಥಳೀಯ ಭಾಷೆಯಲ್ಲಿ ಇವುಗಳಿಂದ ಕಂದ ಮೂಲ ಎಂದು ಕರೆಯಲಾಗುತ್ತದೆ. ಇವು ಭೂಮಿಯ ಒಳಗೆ 1 ರಿಂದ 6 ಅಡಿಯ ಆಳದಲ್ಲಿ ದೊರಕುತ್ತದೆ. ಈ ಬೇರುಗಳಿಂದ ಸಸಿಯು ಮಳೆಗಾಲದಲ್ಲಿ ಹೊರಬರುತ್ತದೆ. ಮಳೆಗಾಲದ ನಂತರ ಈ ಗಡ್ಡೆ ಗೆಣಸುಗಳನ್ನು ಹೊರತೆಗೆದು ಸೇವಿಸಬಹುದು. ಜೊತೆಗೆ ವಿವಿಧ ಗಡ್ಡೆಗಳನ್ನು ಕಾಣಬಹುದು. ಇವು ಹಸೆರ್, ಬವಲ, ಕುಂದರಿ, ಪತಾಲ್ ಇವನ್ನು ಬೇಯಿಸಿ ಇಲ್ಲವೇ ಹಸಿಯಾಗಿಯೇ ಸೇವಿಸಬಹುದು.

**ಚಿಗುರಿನ ಸಂಗ್ರಹಣೆ**

ಅರಣ್ಯ ಹಾಗೂ ಸುತ್ತಮುತ್ತಲು ವಾಸಿಸುವ ಆದಿವಾಸಿಗಳು ಬಳ್ಳಿಗಳಿಂದ ಇಲ್ಲವೇ ಎಲೆ ಸಸ್ಯಗಳಿಂದ ಚಿಗುರನ್ನು ಸೇವಿಸಲು ಸಂಗ್ರಹಿಸುತ್ತಾರೆ. ಉದಾಃಕೊಹರಾ, ಹೂ ಕೋಸು, ಎಲೆ ಕೋಸು, ಪುದಿನ, ಕರಿಬೇವು

ಮುಂತಾದವುಗಳನ್ನು ಸೇವಿಸಲು ಸಂಗ್ರಹಿಸುತ್ತಾರೆ. ಸುವಾಸನೆ ಎಲೆಗಳೆಂದರೆ ಆದಿವಾಸಿಗಳಿಗೆ ತುಂಬಾ ಪ್ರೀತಿ ಇದನ್ನು ಅನ್ನ ಹಾಗೂ ಅಂಬಲಿಯೊಂದಿಗೆ ಸೇವಿಸುತ್ತಾರೆ.

**ಖಾದ್ಯ ಎಲೆಗಳ ಸಂಗ್ರಹ**

ಆದಿವಾಸಿಗಳು ಹಲವಾರು ಖಾದ್ಯ ತಯಾರಿಸುವ ಎಲೆಗಳನ್ನು ಸಂಗ್ರಹಿಸುತ್ತಾರೆ. ಚಿಗುರಿದ ಎಲೆಯನ್ನು ಸಂಗ್ರಹಿಸಿ ಉಪ್ಪಿನಕಾಯಿ ತಯಾರಿಸುತ್ತಾರೆ. ಅರಳಿ, ಹುಣಸೆ ಮರದ ಹೊಸ ಚಿಗುರಿನಿಂದ ಖಾದ್ಯ ತಯಾರಿಸುತ್ತಾರೆ. ಹುಣಸೆ ಗಿಡದ ಎಲೆಯಿಂದ ಚಟ್ನಿಯನ್ನು ತಯಾರಿಸುತ್ತಾರೆ. ಪುದಿನ ಎಲೆಯನ್ನು ಸಂಗ್ರಹಿಸಿ ಚಟ್ನಿಯನ್ನು ತಯಾರಿಸುತ್ತಾರೆ.

**ಖಾದ್ಯ ಹೂಗಳ ಸಂಗ್ರಹಣೆ:**

ವಿವಿಧ ಋತುಗಳಲ್ಲಿ ಆದಿವಾಸಿಗಳು ಅರಣ್ಯದಲ್ಲಿ ಖಾದ್ಯ ಹೂಗಳನ್ನು ಸಂಗ್ರಹಿಸುತ್ತಾರೆ. ವಿವಿಧ ಹೂಗಳ ಬಗ್ಗೆ ಸಂಪೂರ್ಣ ಜ್ಞಾನವು ಆವರಿಸಿರುತ್ತದೆ. ಅಗಸ್ತ, ಕರಮ್, ಅರ್ಜುನ್, ಜಮನ್, ನಯರ್, ಸಿಧಾ ಇತ್ಯಾದಿ. ಈ ಹೂಗಳು ಅರಳುವ ಋತು ಹಾಗೂ ಯಾವ ಸ್ಥಳಗಳಲ್ಲಿ ದೊರೆಯುತ್ತವೆ ಎನ್ನುವ ಮಾಹಿತಿಯು ಇವರಿಗಿರುತ್ತದೆ.

**ಹಣ್ಣುಗಳ ಸಂಗ್ರಹಣೆ**

ವಿವಿಧ ಗಿಡಗಳಿಂದ ಆದಿವಾಸಿಗಳು ವಿವಿಧ ಹಣ್ಣುಗಳ ಸಂಗ್ರಹಣೆ ಮಾಡುತ್ತಾರೆ. ವಿವಿಧ ಋತುಗಳಲ್ಲಿ ದೊರಕುವ ಹಣ್ಣುಗಳಿಂದ ವಿವಿಧ ಖಾದ್ಯಗಳು ತಯಾರಿ ಮಾಡುತ್ತಾರೆ. ಹಲವು ಬಳ್ಳಿ ಸಸ್ಯಗಳು ಅರಣ್ಯದಲ್ಲಿ ಹಾಗೂ ಅದರ ಸುತ್ತಮುತ್ತ ಸಿಗುತ್ತದೆ. ಈ ಬಳ್ಳಿಗಳಲ್ಲಿ ಹಣ್ಣುಗಳು ಸಿಗುತ್ತವೆ. ಇವು ಯಾವುವೆಂದರೆ ಕೆಕರ, ಗುಣನಿ, ನೆನ, ಕೊಹರ, ಕೈತಾ ಇತ್ಯಾದಿ. ಈ ಹಣ್ಣುಗಳಿಂದ ಖಾದ್ಯ ತಯಾರಿಸುತ್ತಾರೆ. ಮಾವಿನಕಾಯಿ, ಹುಣಸೆಕಾಯಿ, ನೆಲ್ಲಿಕಾಯಿಗಳಿಂದ ಚಟ್ನಿ ಹಾಗೂ ಉಪ್ಪಿನಕಾಯಿಯನ್ನು ತಯಾರಿಸುತ್ತಾರೆ. ಮಾವಿನಕಾಯಿ, ಹುಣಸೆಕಾಯಿ, ಕವಳೆಕಾಯಿ, ನೆಲ್ಲಿಕಾಯಿಯನ್ನು ತಿನ್ನಲು ಸಂಗ್ರಹಿಸುತ್ತಾರೆ. ಯಾವ ಹಣ್ಣುಗಳ ಯಾವ ಸ್ಥಳದಲ್ಲಿ ದೊರೆಯುತ್ತದೆ ಹಾಗೂ ಯಾವ ಋತುವಿನಲ್ಲಿ ದೊರೆಯುತ್ತವೆ ಎನ್ನುವ ಸಂಪೂರ್ಣ ಮಾಹಿತಿ ಇವರಿಗಿರುತ್ತದೆ.

**ಖಾದ್ಯ ಬೀಜಗಳು ಮತ್ತು ಅಣಬೆ ಸಂಗ್ರಹಣೆ**

ಆದಿವಾಸಿಗಳ ಅರಣ್ಯ ಹಾಗೂ ಅದರ ಸುತ್ತಮುತ್ತಲು ದೊರಕುವ ಖಾದ್ಯ ಬೀಜಗಳನ್ನು ಸಂಗ್ರಹಿಸುತ್ತಾರೆ. ಬೇವು, ಹೊಂಗೆ, ಹುಣಸೆ, ಮಾವಿನ ಬೀಜಗಳನ್ನು ಸಂಗ್ರಹಿಸುತ್ತಾರೆ. ಇದರೊಂದಿಗೆ ಇವರು ಮಳೆಗಾಲದಲ್ಲಿ ಬೆಳೆಯುವ ವಿವಿಧ ಅಣಬೆಗಳನ್ನು ಸಂಗ್ರಹಿಸುತ್ತಾರೆ.

**ಜೇನುತುಪ್ಪ ಹಾಗೂ ಮೇಣದ ಸಂಗ್ರಹಣೆ**

ಅರಣ್ಯ ಹಾಗೂ ಅದರ ಸುತ್ತಮುತ್ತಲೂ ನೆಲೆಸಿರುವ ಆದಿವಾಸಿಗಳು ಜೇನುತುಪ್ಪ ಹಾಗೂ ಜೇನನ್ನು ಸಂಗ್ರಹಿಸುತ್ತಾರೆ. ಇವರು ಜೇನನ್ನು ತಿನ್ನುತ್ತಾರೆ. ಇವರು ಜೇನಿನ ಸಂಗ್ರಹಣೆಯ ತಂತ್ರವನ್ನು ಅರಿತಿದ್ದಾರೆ. ಇದನ್ನು ಮಾರುಕಟ್ಟೆಯಲ್ಲಿಯೂ ಸಹ ಮಾರುತ್ತಾರೆ.

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

**ಹೂ ತರಕಾರಿಗಳ ಸಂಗ್ರಹ**

ಅರಣ್ಯ ಹಾಗೂ ಸುತ್ತಮುತ್ತಲೂ ನೆಲೆಸಿರುವ ಆದಿವಾಸಿಗಳು ಹೂ, ತರಕಾರಿಗಳ ಸಂಗ್ರಹಣೆ ಮಾಡುತ್ತಿರುತ್ತಾರೆ. ಹೂ ಕೋಸು, ಎಲೆಕೋಸು ಹಾಗು ಸ್ಥಳೀಯವಾಗಿ ದೊರೆಯುವ ಹೂವುಗಳನ್ನು ಇತ್ಯಾದಿಗಳನ್ನು ಸಂಗ್ರಹಿಸಿ ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರುತ್ತಾರೆ.

**ಆಹಾರ ಸಂಗ್ರಹಣೆಗೆ ಬಳಸುವ ಉಪಕರಣಗಳು**

ಆದಿವಾಸಿಗಳು ಆಹಾರ ಸಂಗ್ರಹಣೆಗಾಗಿ ಸರಳ ಉಪಕರಣಗಳನ್ನು ಉಪಯೋಗಿಸುತ್ತಾರೆ. ಕುಡುಗೋಲು, ಕೊಡಲಿ, ಚೂರಿ, ಚಾಕು ಮುಂತಾದವುಗಳನ್ನು ಬಳಸುತ್ತಾರೆ.

**ಕಿರು ಅರಣ್ಯ ಉತ್ಪಾದನೆಯ ಸಂಗ್ರಹಗಳು**

ಅರಣ್ಯ ಉತ್ಪಾದನೆಯನ್ನು ಎರಡು ವಿಧವಾಗಿ ವರ್ಗೀಕರಿಸಲಾಗಿದೆ. ಕಿರು ಅರಣ್ಯ ಉತ್ಪಾದನೆ ಮತ್ತು ಪ್ರಧಾನ ಅರಣ್ಯ ಉತ್ಪಾದನೆ. ಗೃಹೋಪಯೋಗಿ ವಸ್ತುಗಳ ತಯಾರಿಕೆಗೆ ದೊರಕುವ ಮರಗಳು, ಆಭರಣ ತಯಾರಿಕೆಯ ಮರಗಳು, ಬಿದಿರು ಹಾಗೂ ಪೇಪರ್ ತಯಾರಿಕೆಗೆ ಅನುಕೂಲವಾಗುವ ಮರಗಳು ಪ್ರಧಾನ ಅರಣ್ಯ ಉತ್ಪಾದನೆಯ ವರ್ಗದಲ್ಲಿ ಬರುತ್ತದೆ. ಹೀಗೆ ವಿವಿಧ ಬಗೆಯ ಅರಣ್ಯದಲ್ಲಿರುವ ಮರಗಳು ಬ್ರಿಟೀಷರ ಗಮನವನ್ನು ಆಕರ್ಷಿಸಿತ್ತು. ಆದಕಾರಣ ಬ್ರಿಟೀಷರು ಆದಿವಾಸಿಗಳು ಮರಕಡಿಯುವುದನ್ನು ನಿಷೇಧಿಸಿದರು. ಇವರು ಇಂತಹ ಮರಗಳಿಂದ ಹಡಗು ಹಾಗೂ ತಮ್ಮ ಬಂಗ್ಲೆಯಲ್ಲಿ ಬಳಸಲು ಪೀಠೋಪಕರಣಗಳು ಮತ್ತು ಪೇಪರ್ ಕಾರ್ಖಾನೆಗೆ ಉಪಯೋಗಿಸಿಕೊಂಡರು.

ಬ್ರಿಟೀಷ್ ಸರಕಾರವು ಆದಿವಾಸಿಗಳಿಗೆ ಗಡ್ಡೆ, ಗೆಣಸು, ನಾರು, ಬೇರು, ಹೂ, ಎಲೆ, ಮೇಣ, ಜೇನುಗಳ ಸಂಗ್ರಹಣೆ ಮತ್ತು ಮಾರಾಟ ಮಾಡಲು ಬಿಟ್ಟಿರುತ್ತಾರೆ. ಬ್ರಿಟೀಷರಿಗೆ ಇವುಗಳ ಬೆಲೆಯ ಮಹತ್ವವಲ್ಲ. ಆದರೆ ಇದು ಅರಣ್ಯದ ಕಿರು ಉತ್ಪಾದನೆಯೆಂದು ಪರಿಗಣಿಸಲಾಗಿದೆ. ಬ್ರಿಟೀಷರಿಗೆ ಈ ಕಿರು ಅರಣ್ಯ ಉತ್ಪಾದನೆಯು ಮಹತ್ವವಲ್ಲದಿದ್ದರೂ ಆದಿವಾಸಿಗಳ ಉಳಿವಿಗೆ ಇವುಗಳ ಸಂಗ್ರಹಣೆ ಮಹತ್ವದ್ದಾಗಿದೆ. ಅನಾದಿಕಾಲದಿಂದಲೂ ಅರಣ್ಯ ಹಾಗೂ ಆದಿವಾಸಿಗಳ ನಡುವೆ ನಿಕಟ ಸಂಬಂಧವಿದೆ. ಆರಂಭದಲ್ಲಿ ಕಿರು ಅರಣ್ಯ ಉತ್ಪಾದನೆಯನ್ನು ಸೇವನೆಗಾಗಿ ಮಾತ್ರ ಸಂಗ್ರಹಿಸಲಾಗುತ್ತಿತ್ತು. ನಂತರದಲ್ಲಿ ಇತರೇ ಸಮುದಾಯಗಳೊಡನೆ ಪರಸ್ಪರ ವಿನಿಮಯಕ್ಕೆ ಕೊಂಡೊಯ್ಯುತ್ತಿದ್ದರು. ನಂತರದಲ್ಲಿ ಸಾಹುಕಾರ, ಮಹಾಜನರ, ಸ್ಥಳೀಯ ವ್ಯಾಪಾರಸ್ಥರಿಗೆ ಮಾರುತ್ತಿದ್ದರು. ಆದ್ದರಿಂದ ಕಿರು ಅರಣ್ಯ ಉತ್ಪಾದನೆಯ ಸಂಗ್ರಹ ಕೇವಲ ಅವರ ಸೇವನೆಗೆ ಮಾತ್ರವಲ್ಲದೇ ಸ್ವಲ್ಪ ಹಣ ಗಳಿಸಲು ಸಹಕಾರಿಯಾಗಿತ್ತು.

ವರ್ಷವಿಡೀ ಬೇರೆ ಬೇರೆ ಋತುಗಳಲ್ಲಿ ಅರಣ್ಯ ಉತ್ಪಾದನೆಗಳನ್ನು ಕಾಣಬಹುದು. ಇಂದಿಗೂ 74 ಆದಿವಾಸಿ ಸಮುದಾಯಗಳ ಗುಂಪುಗಳು ಅರಣ್ಯಗಳಲ್ಲಿ ಕಿರು ಅರಣ್ಯ ಉತ್ಪಾದನೆಗಳ ಸಂಗ್ರಹದಲ್ಲಿ ತೊಡಗಿವೆ. ಕಿರು ಅರಣ್ಯ ಉತ್ಪಾದನೆಳನ್ನು, ಅವಶ್ಯ ಎಣ್ಣೆಯನ್ನು ಉತ್ಪತ್ತಿ ಮಾಡುವ ಸಸ್ಯಗಳು, ಔಷಧಿ ಗುಣ ಹೊಂದಿರುವ ಸಸ್ಯಗಳು, ಸ್ವಾಭಾವಿಕ ಕೊಬ್ಬಿನಾಂಶ ಹೊಂದಿರುವ ಸಸ್ಯಗಳು, ಅಂಟು ಹಾಗೂ ರಾಳ, ವರ್ಣಗಳು(ಬಣ್ಣ) ತಯಾರಿಕೆಯ ಸಸ್ಯಗಳು, ನಾರು ಮತ್ತು ರೇಷ್ಮೆ, ಬಿದಿರು ಮತ್ತು ಬೆತ್ತ, ಗಡ್ಡೆ, ಗೆಣಸು,

ಹಣ್ಣು, ಹೂ, ಬೀಜಗಳನ್ನು ಉತ್ಪತ್ತಿ ಮಾಡುವ ಸಸ್ಯಗಳು, ಮೇವು ಮತ್ತು ಹುಲ್ಲು, ಜೇನು ಮತ್ತು ಮೇಣ, ಅರಗು, ದೊನ್ನೆಗಳ ತಯಾರಿಕ ಎಲೆಗಳು, ಹಗ್ಗಗಳನ್ನು ತಯಾರಿಸುವ ತೊಗಟೆ ಮತ್ತು ನಾರು, ತಟ್ಟೆಗಳ ತಯಾರಿಕೆಗೆ ಮುತ್ತುಗದ ಎಲೆ ಬಳಕೆ ಹಾಗೂ ತೊಗಟೆಗಳು, ಬೀಡಿ ತಯಾರಿಕೆಗಾಗಿ ಮುತ್ತುಗದ ಎಲೆ ಬಳಕೆ ಮುಂತಾದವುದಗಳನ್ನಾಗಿ ವಿಭಾಗಿಸಿಕೊಳ್ಳಬಹುದಾಗಿದೆ.

ಸ್ವಾತಂತ್ರ್ಯಕ್ಕೂ ಮುನ್ನ ಕಿರು ಅರಣ್ಯ ಉತ್ಪಾದನೆಯು ಕಡಿಮೆ ಆದಾಯವನ್ನು ನೀಡುವುದೆಂದು ಅರಣ್ಯ ಇಲಾಖೆಯು ಗಣನೆಗೆ ತೆಗೆದುಕೊಂಡಿರಲಿಲ್ಲ. ಆದರೂ ಇದರಿಂದ ಅರಣ್ಯ ಇಲಾಖೆಗೆ ಸಾಕಷ್ಟು ಲಾಭವಾಗುತ್ತಿದೆ. ಇವುಗಳ ಉತ್ಪಾದನೆ ಹಾಗೂ ಸಂಗ್ರಹದಿಂದ ಸಾಕಷ್ಟು ಆದಾಯ ದೊರೆಯುತ್ತಿದೆ. ಸಾಂಪ್ರದಾಯಿಕವಾಗಿ ನಮ್ಮ ದೇಶದ ಆದಿವಾಸಿಗಳು ಕಿರು ಅರಣ್ಯ ಉತ್ಪಾದನೆಯ ಸಂಗ್ರಹವನ್ನು ತಮ್ಮ ಅಸ್ತಿತ್ವಕ್ಕಾಗಿ ಹಾಗೂ ಪೂರಕ ಆದಾಯವೆಂದು ಪರಿಗಣಿಸಿದ್ದಾರೆ. ಸ್ವತಂತ್ರ್ಯ ನಂತರ ಹಲವು ಆದಿವಾಸಿಗಳು ಗಣನೀಯವಾಗಿ ಪ್ರಗತಿಗೊಂಡಿದ್ದಾರೆ. ಇವರು ಆಹಾರ ಸಂಗ್ರಹಣೆ ಹಾಗೂ ಕುರಿಸಾಕಣೆಯಿಂದ ನೆಲೆಯೂರಿದ ಕೃಷಿಗೆ ಪ್ರಗತಿಗೊಂಡಿದ್ದಾರೆ. ಇವರು ಹಲವು ಆರ್ಥಿಕ ಅಭಿವೃದ್ಧಿ ಯೋಜನೆಗಳಿಂದ ಪ್ರಯೋಜನ ಪಡೆದುಕೊಂಡಿದ್ದಾರೆ. ಇಂದು ಆದಿವಾಸಿಗಳು, ವಿವಿಧ ಆರ್ಥಿಕ ಅಭಿವೃದ್ಧಿಯ ಹಂತದಲ್ಲಿರುವರು. ಇದು ಅವರ ಕಿರು ಅರಣ್ಯ ಉತ್ಪಾದನೆಯ ಸಂಗ್ರಹದ ಅವಲಂಬನೆ ಮೇಲೆ ಪರಿಣಾಮ ಬೀರುತ್ತದೆ. ಇಂದಿಗೂ ಹಲವು ಪ್ರಾಚೀನ ಆದಿವಾಸಿಗಳು ತಮ್ಮ ಜೀವನಾಧಾರಕ್ಕಾಗಿ ಹಾಗೂ ಅಸ್ತಿತ್ವಕ್ಕಾಗಿ ಕಿರು ಅರಣ್ಯ ಉತ್ಪಾದನೆಯನ್ನೇ ಅವಲಂಬಿಸಿದ್ದಾರೆ. ಇನ್ನೂ ಹಲವರು ಆಹಾರ ಸಂಗ್ರಹಣೆಯ ಹಂತದಲ್ಲೇ ಇರುವರು ಇವರು ಗಡ್ಡೆ, ಗೆಣಸು, ಎಲೆ, ಬೇರು, ನಾರು, ಹೂ, ಹಣ್ಣು, ಅಣಬೆ, ಜೇನು ಇತ್ಯಾದಿ ಸಂಗ್ರಹಣೆ ಮಾಡುತ್ತಿದ್ದಾರೆ. ಪೂರಕ ಆದಾಯವೆಂದು, ಕಿರು ಅರಣ್ಯ ಉತ್ಪಾದನೆಯ ಸಂಗ್ರಹದಲ್ಲಿ ತೊಡಗಿದ್ದಾರೆ. ಆದರೆ ಇಂದು ರಾಷ್ಟ್ರೀಯ ಉದ್ಯಾನವನಗಳು ಹಾಗೂ ರಾಷ್ಟ್ರೀಯ ಅಭಯಾರಣ್ಯ, ಪಕ್ಷಿಧಾಮಗಳ, ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಕೈಗಾರಿಕೆಗಳು ಸ್ಥಾಪನೆಯಿಂದ ಆದಿವಾಸಿಗಳು ತೊಂದರೆ ಎದುರಿಸುತ್ತಿದ್ದಾರೆ. ಸ್ವಾತಂತ್ರ್ಯ ನಂತರ ಅರಣ್ಯದ ಭೂ ಪ್ರದೇಶವು ಕಡಿಮೆಯಾಗುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಈ ಮೇಲಿನ ಅಭಿವೃದ್ಧಿಯ ಹಂತವನ್ನು ಗಮನಿಸಿದಾಗ, ಆದಿವಾಸಿಗಳ ಕಿರು ಅರಣ್ಯ ಉತ್ಪಾದನೆಯ ಸಂಗ್ರಹ ಕುರಿತು ನಿಖರವಾದ ಅಂಕಿ ಅಂಶಗಳನ್ನು ನೀಡಲು ಕ್ಲಿಷ್ಟಕರ.

**ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಹಾಗೂ ಖಾಸಗಿ ವ್ಯಾಪಾರ**

ಐತಿಹಾಸಿಕವಾಗಿ ಆದಿವಾಸಿಗಳು ಕಿರು ಅರಣ್ಯ ಉತ್ಪಾದನೆಯನ್ನು ತಮ್ಮ ಸ್ವಂತ ಬಳಕೆಗೆ ಹಾಗೂ ಸೇವನೆಗೆ ಸಂಗ್ರಹಿಸುತ್ತಿದ್ದರು. ಇತರೇ ವ್ಯಾಪಾರಸ್ಥರು ಆದಿವಾಸಿಗಳ ನೆಲೆಗೆ ಹೆಜ್ಜೆ ಹಾಕಿದಾಗ ಈ ಸಂಗ್ರಹಣೆಯಲ್ಲಿ ಬದಲಾವಣೆಯಾಯಿತು. ಇವರು ವಿನಿಮಯ ಪದ್ಧತಿಯನ್ನು ಆದಿವಾಸಿಗಳ ನೆಲೆಗಳಲ್ಲಿ ಪರಿಚಯಿಸಿದರು. ಆದಿವಾಸಿಗಳಲ್ಲದ ವ್ಯಾಪಾರಸ್ಥರು ಆದಿವಾಸಿಗಳಿರುವ ನೆಲೆಗಳಿಗೆ ಸೀಮೆ ಎಣ್ಣೆ, ಉಪ್ಪು, ಮಸಾಲೆ ಪದಾರ್ಥಗಳನ್ನು ಪೂರೈಸಿ ಅರಣ್ಯ ಉತ್ಪಾದನೆಗಳು ಹಾಗೂ ಕೃಷಿ ಉತ್ಪಾದನೆಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಈ ಪದ್ಧತಿಯು ಆದಿವಾಸಿಗಳಲ್ಲಿ ಕಿರು ಅರಣ್ಯ ಉತ್ಪಾದನೆಯನ್ನು ಸಂಗ್ರಹಿಸುವಲ್ಲಿ ಸ್ವಾರ್ಥ ಸೃಷ್ಟಿಸಿತು. ವ್ಯಾಪಾರಸ್ಥರು, ಕಿರು ಅರಣ್ಯ ಉತ್ಪಾದನೆಯ ವಾಣಿಜ್ಯ ಮೌಲ್ಯವನ್ನು ಅರಿತುಕೊಂಡು

ನಂತರದಲ್ಲಿ ಹಣವನ್ನು ಕೊಟ್ಟು ಕೊಳ್ಳಲು ಆರಂಭಿಸಿದರು. ಇದರಿಂದ ಸ್ಪರ್ಧೆ ಇನ್ನೂ ಅಧಿಕಗೊಂಡಿತು. ಈ ಖಾಸಗಿ ವ್ಯಾಪಾರಸ್ಥರು ಅತ್ಯಂತ ಕಡಿಮೆ ಬೆಲೆಗೆ ಅರಣ್ಯ ಉತ್ಪಾದನೆಯನ್ನು ಕೊಳ್ಳುತ್ತಿದ್ದರು. ಹಾಗೂ ಆದಿವಾಸಿಗಳಿಗೆ ಸಾಲವನ್ನು ನೀಡುತ್ತಿದ್ದರು. ಈ ಸಾಲವನ್ನು ಅವರಿಂದ ಕೊಳ್ಳುತ್ತಿದ್ದ ಉತ್ಪಾದನೆಗೆ ಸರಿ ಹೊಂದಿಸುತ್ತಿದ್ದರು. ಕ್ರಮೇಣವಾಗಿ ಆದಿವಾಸಿಗಳ ಭೂಮಿಯನ್ನು ಅಡವಿಟ್ಟುಕೊಂಡರು. ಯಾರು ಭೂಮಿಯನ್ನು ಹೊಂದಿರುತ್ತಿರಲಿಲ್ಲವೋ ಅವರು ಉಳ್ಳವರ ಭೂಮಿಯಲ್ಲಿ ಜೀತದಾಳುಗಳಾಗಿ ಶ್ರಮಿಸಬೇಕಾಗುತ್ತಿತ್ತು. ಇವರ ಅರಣ್ಯ ಉತ್ಪಾದನಾ ಸಂಗ್ರಹಣೆಯನ್ನು ಅತ್ಯಂತ ಕಡಿಮೆ ಬೆಲೆಗೆ ಕೊಳ್ಳುತ್ತಿದ್ದರು.

ಒಟ್ಟಾರೆಯಾಗಿ ಹೇಳುವುದಾದರೆ ಆದಿವಾಸಿಗಳ ಅಭಿವೃದ್ಧಿಯಲ್ಲಿ ಅರಣ್ಯ ಮಹತ್ವದ ಪಾತ್ರವಹಿಸುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅರಣ್ಯ ಇಲಾಖೆಯ ಕಾನೂನುಗಳಿಂದಾಗಿ ಅರಣ್ಯ ಪ್ರವೇಶಕ್ಕೆ ಅಡಚಣೆಯುಂಟಾಗಿರುವುದ್ದರಿಂದ ಅವರು ಕೂಲಿ ಕಾರ್ಮಿಕರಾಗಿ ದುಡಿಯುವುದು ಸಮಕಾಲೀನ ಪರಿಸ್ಥಿತಿಯಾಗಿದೆ.

**ಪರಾಮರ್ಶನ ಗ್ರಂಥಗಳು**


- Buchanar Francis. (1807). A Journey from Madras through the countries of Mysore, canara and Malabar, Vol. 2, London.
- Enthoven R E. (1990). The Tribes and Caste of Bombay. Asian Educational Services, New Delhi.
- Iyer L. A .K. (1930). The Mysore Tribes and Castes. Krishna Mittal for Mittal Publications. Mohan gardan, New Delhi.
- K.S.Singh. (2003). People of India (Karnataka volumes). Anthropological survey of India- Affiliated East-West press PVT Ltd, New Delhi.
- Thurston E. (1995). Castes and Tribes of Southern India. Cosmos Publication, New Delhi.
- Upadhyay V.S and GayaPandey (2003). Tribal Development in India. Crown Publication, Ranelhi, Jharkhand.
- Venkata Rango Katti. (1893). Bombay Gazetteer, Dharwad, Belgum, Bijapur & Canara Dist. Asian Educational services, New Delhi
- Vidyathri L P. (1977). The Tribal Culture of India. Concept Publishing Company, New Delhi.